<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.</u> PW-1

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 06.08.2024

ಪಾಟಿ ಸವಾಲು : ಆರೋಪಿ ಪರ ವಕೀಲರಿಂದ

ನಾನು 4 ನೇ ತರಗತಿ ವರೆಗೂ ಓದಿರುತ್ತೇನೆ. ನನಗೆ ಕನ್ನಡ ಹೊರತುಪಡಿಸಿ ಬೇರೆ ಭಾಷೆ ಓದಲು ಬರುವುದಿಲ್ಲ. ನೀವು ದೂರನ್ನು ಹಾಗೂ ನಿಮ್ಮ ಮುಖ್ಯ ವಿಚಾರಣೆಯನ್ನು ಯಾವ ಭಾಷೆಯಲ್ಲಿ ಹಾಕಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಕನ್ನಡದಲ್ಲಿಹಾಕಿಸಿರುತ್ತೇನೆ ಎಂದು ನುಡಿಯುತ್ತಾರೆ. ದೂರು ಮತ್ತು ಸಾಕ್ಷಿ ವಿಚಾರಣೆಯನ್ನು ನೀವು ಓದಿ ಸಹಿ ಮಾಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸಣ್ಣ ಪುಟ್ಟ ಖರ್ಚುಗಳಿಗೆ ಹಣ ಬೇಕೆಂದು ಆರೋಪಿ ನನ್ನ ಬಳಿ ಹಣ ಕೇಳಿರುತ್ತಾರೆ.

ಆರೋಪಿ ನನಗೆ 10-12 ವರ್ಷಗಳಿಂದ ಪರಿಚಯ ಇರುತ್ತಾರೆ. ಆರೋಪಿಯ ತಾಯಿ ಹೆಸರು ನನಗೆ ಗೊತ್ತಿಲ್ಲ. ಆರೋಪಿಯ ಮಕ್ಕಳು ಏನು ವಿದ್ಯಾಭ್ಯಾಸ ಮಾಡುತ್ತಿದ್ದಾರೆಂದು ನಾನು ತಿಳಿದುಕೊಂಡಿಲ್ಲ. ಆರೋಪಿ ತಂದೆ ಯಾರ ಜೊತೆ ಇದ್ದಾರೆಂದು ನಾನು ತಿಳಿದುಕೊಂಡಿರುವುದಿಲ್ಲ. ಆರೋಪಿಯ ತಂದೆ ಹೆಸರಾಗಲಿ ಅಥವಾ ಅವರ ಮಕ್ಕಳ ಹೆಸರಾಗಲಿ ನನಗೆ ಗೊತ್ತಿರುವುದಿಲ್ಲ. ಆರೋಪಿಯ ಗಂಡನ ತಂದೆ ತಾಯಿ ಹೆಸರು ನನಗೆ ಗೊತ್ತಿಲ್ಲ. ಆರೋಪಿಯು ಭೋಗ್ಯ, ಬಾಡಿಗೆ ಅಥವಾ ಸ್ವಂತ ಮನೆಯಲ್ಲಿ ವಾಸವಾಗಿರುತ್ತಾರೆಯೇ ಎಂದು ತಿಳಿದುಕೊಂಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲವೆಂದು ನುಡಿಯುತ್ತಾರೆ. ಆರೋಪಿಯ ಸ್ವಂತ ವಿಳಾಸ ಏನು ಎಂಬ ಪ್ರಶ್ನೆಗೆ ಸಾಕ್ಷಿಯು ಹಿನಕಲ್ ಗ್ರಾಮ ಪಂಚಾಯಿತಿಯ ಕಛೇರಿಯ ಮುಂದೆ ಇರುವ ಮನೆ ಎಂದು ನುಡಿಯುತ್ತಾರೆ. ಹಿನಕಲ್ ಗ್ರಾಮ ಪಂಚಾಯಿತಿಯು ಇಲವಾಲ ಹೋಬಳಿ, ಮೈಸೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ಸರಿ. ನಾನು ಆರೋಪಿಯ ಮನೆಗೆ ಹೋಗಿರುತ್ತೇನೆ. ಹಿನಕಲ್ ವಿಳಾಸಕ್ಕೆ ನೀವು ನೋಟೀಸ್ ನೀಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಹಿನಕಲ್ ನಲ್ಲಿ ಇರುವ ಮನೆಯ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ಆರೋಪಿಯು ಪ್ರಾವಿಜನ್ ಸ್ಟೋರ್ ಮತ್ತು ಕಾಫಿ ಪುಡಿ ಅಂಗಡಿಯನ್ನು ಇಟ್ಟುಕೊಂಡಿದ್ದರು. ಸದರಿ ವ್ಯವಹಾರವನ್ನು ಹಿನಕಲ್ ಗ್ರಾಮ ಪಂಚಾಯಿತಿ ಎದುರುಗಡೆ ಇರುವ ಮಳಿಗೆಯಲ್ಲಿ ಇಟ್ಟುಕೊಂಡಿದ್ದರು. ಪ್ರಾವಿಜನ್ ಸ್ಟೋರ್ ಮತ್ತು

ಕಾಫಿ ಪುಡಿ ಅಂಗಡಿ ಇಟ್ಟುಕೊಂಡಿರುವ ಬಗ್ಗೆ ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ.

ನಾನು ಕ್ಯಾಟರಿಂಗ್ ಕೆಲಸ ಮಾಡುತ್ತೇನೆ. ನಮ್ಮ ಮೂಲ ಊರು ನಾಗಮಂಗಲ ತಾಲ್ಲೂಕಿನ ಕಾಂತಾಪುರ ಗ್ರಾಮ ಇರುತ್ತದೆ. ನನ್ನ ತಂದೆ ಹೆಸರು ಬೋರೇಗೌಡ ಇರುತ್ತದೆ. ನನ್ನ ತಾಯಿ ಹೆಸರು ನಿಂಗಮ್ಮ ಇರುತ್ತದೆ. ನಾನು ಶಾರದಾದೇವಿ ನಗರದಲ್ಲಿ ಕ್ಯಾಟರಿಂಗ್ ನಲ್ಲಿ ಕೆಲಸ ಮಾಡುತ್ತೇನೆ. ಸದರಿ ಕ್ಯಾಟರಿಂಗ್ ನಾರಾಯಣ ಭಟ್ಟರು ಎಂಬುವವರಿಗೆ ಸೇರಿದ್ದು ಇರುತ್ತದೆ. ಸದರಿ ಕ್ಯಾಟರಿಂಗ್ ಇಂದ ನನಗೆ ತಿಂಗಳಿಗೆ ರೂ.20,000/- ಆದಾಯ ಇರುತ್ತದೆ. ಈ ಆದಾಯವನ್ನು ಹೊರತುಪಡಿಸಿ ನನಗೆ ಊರಿನಲ್ಲಿ ತೆಂಗಿನ ತೋಟ, ಗದ್ದೆ ಇಂದ ಆದಾಯ ಬರುತ್ತದೆ. ತೆಂಗಿನ ತೋಟ ಮತ್ತು ಗದ್ದೆ ಇರುವ ಬಗ್ಗೆ ಪಹಣಿ ಪತ್ರಿಕೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಮೇಲಿನ ಎಲ್ಲಾ ಮೂಲಗಳಿಂದ ನನಗೆ ವಾರ್ಷಿಕವಾಗಿ ಸುಮಾರು ರೂ.2,00,000-2,50,000/- ಆದಾಯ ಬರುತ್ತದೆ. ನನ್ನ ಬಳಿ ಕಾರ್ಮಿಕರ ಗುರುತಿನ ಚೀಟಿ ಇರುತ್ತದೆ.ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಆದಾಯ ತೆರಿಗೆ ಪಾವತಿದಾರರನಲ್ಲ. ನನ್ನ ಬಳಿ ಹಸಿರು ಪಡಿತರ ಚೀಟಿ ಇರುತ್ತದೆ. ಹಸಿರು ಪಡಿತರ ಚೀಟಿಯನ್ನು ಕಡುಬಡವರಿಗೆ ಮತ್ತು ನಿರ್ಗತಿಕರಿಗೆ ಕೊಡುತ್ತಾರೆ ಎಂದರೆ ಸರಿ.

ನಾನು 10-15 ವರ್ಷಗಳಿಂದ ಮೊಬೈಲ್ ಬಳಕೆ ಮಾಡುತ್ತಿದ್ದೇನೆ. ನನ್ನ ಮೊಬೈಲ್ ಸಂಃ9880681693 ಇರುತ್ತದೆ. ನಾನು ಆರೋಪಿಗ ಸುಮಾರು 7-8 ವರ್ಷಗಳಿಂದ ಮೊಬೈಲ್ ನಿಂದ ಕರೆ ಮಾಡಿರುತ್ತೇನೆ. ಆರೋಪಿಯ ಮೊಬೈಲ್ ಸಂಃ 9535572505 ಇರುತ್ತದೆ ಎಂದರೆ ಸರಿ. ಆರೋಪಿಗೆ ನೀವು ಯಾವ ಕಾರಣಕ್ಕಾಗಿ ಕರೆ ಮಾಡುತ್ತಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ಕ್ಯಾಟರಿಂಗ್ ನಲ್ಲಿ ದಿನಸಿ ವಸ್ತುಗಳ ಅವಶ್ಯಕತೆ ಇದ್ದು ಅದನ್ನು ತೆಗೆದುಕೊಳ್ಳುವ ಸಲುವಾಗಿ ಆರೋಪಿಗೆ ನಾನು ಕರೆ ಮಾಡುತ್ತಿದ್ದೇನು ಎಂದು ನುಡಿಯುತ್ತಾರೆ. ಆರೋಪಿ ಕಡೆಯಿಂದ ದಿನಸಿ ತೆಗೆದುಕೊಂಡ ಬಗ್ಗೆ ನಾನು ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ಆರೋಪಿಯ ಗಂಡ ಹಾಗೂ ನಾನು ಆತ್ಮೀಯ ಸ್ನೇಹಿತರು ಎಂದರೆ ಸರಿ. ಮೈಸೂರಿನಲ್ಲಿರುವ ನಿರ್ಮಲಾ ಕಾನ್ವೆಂಟ್ ಹತ್ತಿರ ಆರೋಪಿಯ ಗಂಡ ಕ್ಯಾಟರಿಂಗ್ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅಲ್ಲಿರುವ ಗೆಸ್ಟ ಹೌಸ್ ನಲ್ಲಿ ನೀವು ಸೆಕ್ಯೂರಿಟಿಯಾಗಿ

ಕೆಲಸ ಮಾಡುತ್ತಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ಪಾರ್ಟ್ ಟೈಂ ನಲ್ಲಿ ಸೆಕ್ಯೂರಿಟಿಯಾಗಿ ಕೆಲಸ ಮಾಡುತ್ತಿದ್ದೇನು ಎಂದು ನುಡಿಯುತ್ತಾರೆ.

ಆರೋಪಿ ಗಂಡ ಹಾಗೂ ನನ್ನ ನಡುವೆ ಆರ್ಥಿಕವಾಗಿ ವ್ಯವಹಾರ ಆಗಿತ್ತು ಎಂದರೆ ಸರಿಯಲ್ಲ. ನೀವು ಹೇಳಿರುವಂತೆ ಆರೋಪಿ ಮತ್ತು ನಿಮ್ಮ ನಡುವೆ ಇರುವ ಹಣದ ವ್ಯವಹಾರವು ಯಾರಿಗೆ ತಿಳಿದಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ಮನೆಯಲ್ಲಿ ನನ್ನ ಹೆಂಡತಿ ಮತ್ತು ನನ್ನ ಮಕ್ಕಳಿಗೆ, ನನ್ನ ಸ್ನೇಹಿತರಿಗೆ ತಿಳಿದಿದ್ದು ಆರೋಪಿತರ ಮನೆಯಲ್ಲಿ ಅವರ ಗಂಡ, ತಾಯಿ , ಆರೋಪಿಯ ತಂಗಿ, ತಂಗಿ ಗಂಡನಿಗೆ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ಆರೋಪಿಯು ಅವರ ತಾಯಿ ಮನೆಯಲ್ಲಿ ಇರುತ್ತಾರೆಯೇ ಅಥವಾ ಅವರ ಗಂಡನ ಮನೆಯಲ್ಲಿ ಇರುತ್ತಾರೆಯೇ ಎಂದು ನನಗೆ ಗೊತ್ತಿರುವುದಿಲ್ಲ. ಎಷ್ಟು ವರ್ಷಗಳ ಹಿಂದೆ ನಿಮಗೂ ಮತ್ತು ಆರೋಪಿಗೂ ವ್ಯವಹಾರ ಆಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ದಿಃ 05.06.2020 ರಂದು ಆರೋಪಿ ಹಣ ಬೇಕೆಂದು ಕೇಳಿರುತ್ತಾರೆ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಮಾನ್ಯ ಆರೋಪಿ  ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಗಿದೆ)

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.